# ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:-* ಶ್ರೀ ಬಸವರಾಜಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ನೆಲಮಂಗಲ, ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖೆ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ- ಆದೇಶ.

*ಓದಲಾಗಿದೆ:*

| | |
|---|---|
| *1.* | ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಅ.ಸ.ಪ.ಸಂಖ್ಯೆ:ಕಂಪ್ಲೇಟ್/ಬಿಡಿ/331/2016/ಎ.ಆರ್.ಎಲ್.ಓ/ದಿನಾಂಕ:27.5.2017 |
| *2.* | ಮಾನ್ಯ ಉಪ ಲೋಕಾಯುಕ್ತರವರ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ವರದಿ ಸಂಖ್ಯೆ: ಕಂಪ್ಲೇಟ್/ಬಿಡಿ/331/2016/ಎ.ಆರ್.ಎಲ್.ಓ/ದಿನಾಂಕ:12.3.2017 |

*ಪ್ರಸ್ತಾವನೆ:-*

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ದಿನಾಂಕ:27.5.2017 ರ ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಮಾನ್ಯ ಉಪ ಲೋಕಾಯುಕ್ತರವರ ದಿನಾಂಕ:12.3.2017 ರ ಲೋಕಾಯುಕ್ತ ಕಾಯ್ದೆಯ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ಶಿವಕುಮಾರ್ ಬಿನ್ ಚಿನ್ನರಂಗಯ್ಯ ವಿಶ್ವೇಶ್ವರಪುರ, ನೆಲಮಂಗಲ ಇವರು ಲೋಕಾಯುಕ್ತ ಕಛೇರಿಗೆ ಸಲ್ಲಿಸಿದ್ದ ದೂರಿನಲ್ಲಿ ವಿಶ್ವೇಶ್ವರ ಪುರ ಗ್ರಾಮದ ಸರ್ವೆ ನಂ.18/2 ರಲ್ಲಿ 7 ಗುಂಟೆ ಪಿತ್ರಾರ್ಜಿತ ಭೂಮಿಯಿದ್ದು ಅಪಾದಿತರಾದ ಶ್ರೀ ಬಸವರಾಜಣ್ಣ, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ನೆಲಮಂಗಲ ಇವರು ಸದರಿ ಭೂಮಿಯನ್ನು ನಿಯಮಾನುಸಾರ ಸ್ವಾಧೀನಪಡಿಸಿಕೊಳ್ಳದೇ ಪರಿಹಾರ ನೀಡದೆ ರಾತ್ರೋರಾತ್ರಿ 40 ಅಡಿ ಅಗಲದ ರಸ್ತೆ ಮಾಡಿದ್ದು, ಸದರಿ ಉದ್ದೇಶಕ್ಕಾಗಿ ತಮ್ಮ ಭೂಮಿಯನ್ನು ಅತಿಕ್ರಮಿಸಿಕೊಂಡಿರುತ್ತಾರೆಂದು ಆರೋಪಿಸಿ, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಸದರಿ ದೂರಿನ ಕುರಿತು ಲೋಕಾಯುಕ್ತ ಸಂಸ್ಥೆಯು ತನಿಖೆ ಕೈಗೊಂಡಿದ್ದು, ಅಪಾದಿತರಾದ ಶ್ರೀ ಬಸವರಾಜಣ್ಣ, ಸ.ಕಾ.ಇಂ ಇವರಿಗೆ ವಿವರಣೆ ಪಡೆದಿರುತ್ತದೆ. ಸದರಿಯವರು ನೀಡಿರುವ ವಿವರಣೆಯನುಸಾರ ಜನಪ್ರತಿನಿಧಿಗಳ ಒತ್ತಾಯದ ಮೇರೆಗೆ ಹಾಗೂ ಸ್ಥಳೀಯ ಶಾಸಕರ ಶಿಫಾರಸ್ಸಿನ ಮೇರೆಗೆ ರಾಷ್ಟ್ರೀಯ ಹೆದ್ದಾರಿ ನಾಲ್ಕರಿಂದ ಓಬನಾಯಕನಹಳ್ಳಿ ಮಾರ್ಗ ಎಲಚಿಗೆರೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಫಾರ್ಮೇಷನ್ ಹಂತದಲ್ಲಿದ್ದ ಸಂದರ್ಭದಲ್ಲಿ ತಕರಾರು ಅರ್ಜಿ ಸಲ್ಲಿಕೆಯಾಗಿದ್ದು, ಕಾಮಗಾರಿಯನ್ನು ಸ್ಥಗಿತಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿತ್ತೆಂದು ನಂತರ ಜನ ಪ್ರತಿನಿಧಿಗಳ ಮೊಕ್ಕಾಂ ಮಾಡಿದ್ದರಿಂದ ಅವರುಗಳ ಒತ್ತಾಯಕ್ಕೆ ರಸ್ತೆ ನಿರ್ಮಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಲಾಗಿದೆಯೇ ವಿನ: ಬೇರೆ ಉದ್ದೇಶ ಇರುವುದಿಲ್ಲವೆಂದು ವಿವರಣೆ ಸಲ್ಲಿಸಿರುತ್ತಾರೆಂದು ಮಾನ್ಯ ಉಪಲೋಕಾಯುಕ್ತರ ಕಲಂ 12(3) ರ ವರದಿಯಲ್ಲಿ ತಿಳಿಸಲಾಗಿದೆ.

---2

ಮುಂದುವರಿದು, ರಸ್ತೆಯನ್ನು ಅಭಿವೃದ್ಧಿ ಪಡಿಸುವ ಪೂರ್ವದಲ್ಲಿ 8 ಅಡಿ ಅಗಲ ಕಾಲು ಹಾದಿ ಇರುವುದು ದಾಖಲೆಗಳಿಂದ ಕಂಡು ಬರುತ್ತದೆಯೆಂದು, ಸದರಿ ಕಾಲು ಹಾದಿಯನ್ನು 40 ಅಡಿ ಅಗಲದ ರಸ್ತೆಯಾಗಿ ಅಭಿವೃದ್ಧಿ ಪಡಿಸಿದ್ದು, ಅಗಲೀಕರಣದಿಂದಾಗಿ ಅತಿಕ್ರಮಿಸಿದ ಜಮೀನನ್ನು ನಿಯಮಾನುಸಾರ ಸ್ವಾಧೀನ ಪಡಿಸಿಕೊಳ್ಳದೆ, ಜಮೀನು ಮಾಲೀಕರಿಗೆ ಪರಿಹಾರ ಧನ ಪಾವತಿಸದೆ ರಸ್ತೆಯನ್ನು ಅಗಲೀಕರಣ ಮಾಡಿರುವುದು ದಾಖಲೆಗಳಿಂದ ತಿಳಿದು ಬರುತ್ತದೆಯೆಂದು, ಶ್ರೀ ಬಸವರಾಜಣ್ಣ ಇವರು ನೀಡಿರುವ ಉತ್ತರವು ಇಲಾಖಾ ವಿಚಾರಣೆಯನ್ನು ಕೈ ಬಿಡಲು ಸೂಕ್ತ ಸಮಾಧನಕರವಾಗಿರುವುದಿಲ್ಲವೆಂದು ಅಪಾಧಿತರು ಸರ್ಕಾರಿ ನೌಕರರಾಗಿದ್ದು, ಅವರ ಕಾರ್ಯನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ನಡೆದು ಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದ್ದು, ಇದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) ರ ಉಲ್ಲಂಘನೆಯಾಗಿದ್ದು, ಅಪಾದಿತರ ವಿರುದ್ಧ ವಿವರವಾದ ಇಲಾಖೆ ವಿಚಾರಣೆಯನ್ನು ಕೈಗೊಳ್ಳಲು ತಮಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತರು ಸರ್ಕಾರವನ್ನು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿರುತ್ತದೆ. ಆರೋಪಿತ ಅಧಿಕಾರಿಯು ಅವರ ವಿವರಣೆಯಲ್ಲಿ ತಿಳಿಸಿರುವಂತೆ ಖಾಸಗಿ ಭೂಮಿಯನ್ನು ರಸ್ತೆಯ ಅಗಲೀಕರಣಕ್ಕೆ ಉಪಯೋಗಿಸಿಕೊಂಡಿರುವುದು ಸ್ಪಷ್ಟವಿರುತ್ತದೆ. ರಸ್ತೆಯ ಅಗಲೀಕರಣ/ ಅಭಿವೃದ್ಧಿ ಪಡಿಸಬೇಕಾದ ಅನಿವಾರ್ಯತೆ ಇದ್ದಲ್ಲಿ ಖಾಸಗಿ ಜಮೀನನ್ನು ಭೂ ಮಾಲೀಕರಿಂದ ನಿಯಮಾನುಸಾರ ಸ್ವಾಧೀನ ಪಡಿಸಿಕೊಂಡು, ಸದರಿ ಜಾಗದಲ್ಲಿ ರಸ್ತೆಯ ಅಭಿವೃದ್ಧಿಯನ್ನು ಕೈಗೊಳ್ಳಬೇಕಾಗಿತ್ತು. ಅದರೆ ಅಪಾದಿತರಾದ ಶ್ರೀ ಬಸವರಾಜಣ್ಣ ಇವರು ಭೂ ಮಾಲೀಕರು ತಕರಾರು ಅರ್ಜಿ ಸಲ್ಲಿಸಿದ್ದರೂ ಸಹ ಅದನ್ನು ಪರಿಗಣಿಸಿದೇ ಜನ ಪ್ರತಿನಿಧಿಗಳು ಒತ್ತಾಯ ಮಾಡಿರುತ್ತಾರೆ ಎಂಬ ಕಾರಣಗಳನ್ನು ನೀಡಿ, ರಸ್ತೆಯನ್ನು ಅಗಲ ಮಾಡುವ ಮೂಲಕ ಅನಧಿಕೃತವಾಗಿ ಖಾಸಗಿ ಜಮೀನನ್ನು ಅತಿಕ್ರಮಿಸಿರುವುದು ಆಕ್ಷೇಪಣೀಯ ಕ್ರಮವಾಗಿರುತ್ತದೆ. ಅಪಾದಿತರು ಸರ್ಕಾರಿ ನೌಕರರಾಗಿದ್ದು ಅವರ ಕಾರ್ಯನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬರುವುದರಿಂದ ಸದರಿಯವರ ವಿರುದ್ಧ ವಿವರವಾದ ಇಲಾಖೆ ವಿಚಾರಣೆಯನ್ನು ನಡೆಸುವುದು ಅಗತ್ಯವೆಂದು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ, ಈ ಆದೇಶ.

**ಆದೇಶ ಸಂಖ್ಯೆ:ಗ್ರಾಅಪ 59 ಇಎನ್‌ಕ್ಯೂ 17, ಬೆಂಗಳೂರು, ದಿನಾಂಕ:23.8.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಬಸವರಾಜಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ನೆಲಮಂಗಲ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ 1957ರ

---3

ನಿಯಮ 11 ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14-ಎ ರಂತೆ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
23/08/2017
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಎ.ಆರ್.ಎಲ್.ಓ-2, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
8. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ).
9. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
10. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್) /ಅಪರ ಕಾರ್ಯದರ್ಶಿ/ ಇ'/9ವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
11. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.